# ಡಾ. ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮಿಗಳು

**ಮಠಾಧಿಪತಿಗಳು, ಹಿರೇಮಠ , ತುಮಕೂರು**

ಜನನ : 29. 03. 1961, ಜನ್ಮಸ್ಥಳ : ಬಿಜಾಪುರ

## ವಿದ್ಯಾರ್ಹತೆ

1. ಎಂ. ಎ. ಸಂಸ್ಕೃತದಲ್ಲಿ ( ಲಬ್ಧಸುವರ್ಣ ಪದಕರು )

2. ಸಂಸ್ಕೃತದಲ್ಲಿ ಪಿಹೆಚ್.ಡಿ.

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಪಿಹೆಚ್.ಡಿ. ಪ್ರಬಂಧ ವಿಷಯ

ಕುಮಾರದಾಸನ 'ಜಾನಕೀಹರಣಮ್' ಮಹಾಕಾವ್ಯ

ಒಂದು ಸಾಹಿತ್ಯಿಕ ಅಧ್ಯಯನ

3. ಶಕ್ತಿವಿಶಿಷ್ಟಾದ್ವೈತದಲ್ಲಿ

'ವೇದಾಂತಾಚಾರ್ಯ' ಪದವಿ

ಕಾಶಿಯ ಶ್ರೀ ಸಂಪೂರ್ಣಾನಂದ ಸಂಸ್ಕೃತ ವಿಶ್ವವಿದ್ಯಾಲಯದಿಂದ

4. ಎಲ್‌ಎಲ್.ಬಿ. ಕಾನೂನು ಪದವಿ

ಬನಾರಸ ಹಿಂದೂ ವಿಶ್ವವಿದ್ಯಾಲಯದಿಂದ, ಕಾಶಿ

**ಸಮಗ್ರವಾಗಿ ಧಾರ್ಮಿಕ ಜೀವನಕ್ಕೆ ಪದಾರ್ಪಣೆ 1993**

## ತುಮಕೂರಿನ ಹಿರೇಮಠದ ಮಠಾಧಿಪತಿಗಳಾಗಿ
## ಅಧಿಕಾರ ಸ್ವೀಕಾರ ಮೇ 6, 1998

## ಸಾಧನೆಗಳ ಪಕ್ಷಿನೋಟ

1. ಅಜ್ಞಾತವಾಗಿದ್ದ ಮತ್ತು ಪಾಳುಬಿದ್ದ ಹಿರೇಮಠದ ಸಮಗ್ರ ಮತ್ತು ಸರ್ವಾಂಗೀಣ ಅಭಿವೃದ್ಧಿಗೆ ನಾಂದಿ.
2. ಶ್ರೀಮಠಕ್ಕೆ ಪುನಃ ಕಾಯಕಲ್ಪ ಮತ್ತು ಶ್ರೀಮಠದ ಕಾರ್ಯಕ್ಷೇತ್ರದ ವಿಸ್ತಾರ
3. ವಿದೇಶಗಳಲ್ಲಿ ಭಾರತೀಯ ಧರ್ಮ ಮತ್ತು ಸಂಸ್ಕೃತಿಗಳ ಕುರಿತು ಉಪನ್ಯಾಸಗಳನ್ನು ನೀಡಿ ಬಂದಿರುವುದು
4. ಹಿರೇಮಠ ವಿದ್ಯಾಸಂಸ್ಥೆಯ ಸ್ಥಾಪನೆ, ತನ್ಮೂಲಕ ಶೈಕ್ಷಣಿಕ ಸೇವೆಗೆ 'ಅಥಶ್ರೀ'.
5. ಮಕ್ಕಳಿಗಾಗಿ ಬೇಸಿಗೆ ಶಿಬಿರಗಳನ್ನು ಏರ್ಪಡಿಸಿರುವುದು.
6. ಮಹಿಳೆಯರಿಗಾಗಿ ರುದ್ರಾಧ್ಯಯನ ಮತ್ತು 'ವೇದ ಶಿಬಿರ'ಗಳನ್ನು ಏರ್ಪಡಿಸಿರುವುದು.
7. ಸರ್ವ ಧರ್ಮಗಳ ಮತ್ತು ಸರ್ವ ಆಚಾರ್ಯರ 'ವಿಚಾರ ವಂದನಾ ಶಿಬಿರ'ಗಳನ್ನು ಏರ್ಪಡಿಸಿರುವುದು.
8. ವಯೋವೃದ್ಧರಿಗೆ ಕಾಶಿ-ಕೇದಾರ ಪ್ರಯಾಗಾದಿ ಯಾತ್ರೆಗಳನ್ನು ಏರ್ಪಡಿಸಿರುವುದು.
9. ಶಿಕ್ಷಣತಜ್ಞರು, ದಕ್ಷ ಅಧಿಕಾರಿಗಳು, ಕವಿ-ಕಲಾವಿದರುಗಳು, ಶತಾಯುಷಿಗಳು ಮತ್ತು ಸಮಾಜ ಸೇವಾ ದುರಂಧರರನ್ನು ಗೌರವಿಸಿರುವುದು.
10. 'ಸಾರೇ ಜಹಾಂ ಸೇ ಅಚ್ಛಾ' ಕಾರ್ಯಕ್ರಮದ ಅಡಿಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಭೇಟಿಕೊಟ್ಟು ಗ್ರಾಮೀಣ ಜನತೆಯನ್ನು ಮತ್ತು ರೈತರನ್ನು ಧಾರ್ಮಿಕ ಮತ್ತು ನೈತಿಕಗೊಳಿಸಿರುವುದು........ಇತ್ಯಾದಿ

## ವಿದೇಶದಲ್ಲಿ ಧರ್ಮಯಾತ್ರೆ

### ವಿಶೇಷ ಆಹ್ವಾನಿತ ಅತಿಥಿಯಾಗಿ

1997, ಡೆಟ್ರಾಯಿಟ್-ಮಿಶಿಗನ್-ಅಮೇರಿಕಾ

1999, ಚಿಕ್ಯಾಗೋ-ಇಲಿನಾಯಿಸ್- ಅಮೇರಿಕಾ

2000ರಲ್ಲಿ ಲಂಡನ್ -ಇಂಗ್ಲಂಡ್, ಟೋರಂಟೋ- ಕೆನಡಾ, ವಾಷಿಂಗ್ಟನ್- ಅಮೇರಿಕಾ
2006 ಆರ್‌ಲ್ಯಾಂಡೋ-ಫ್ಲಾರಿಡಾ, ಅಮೇರಿಕಾ ಮತ್ತು ಬಹಾಮಾ ದ್ವೀಪಗಳು

## ವಿದೇಶದಲ್ಲಿ ಭೇಟಿಕೊಟ್ಟ ಮತ್ತು ಉಪನ್ಯಾಸ ನೀಡಿದ ಪ್ರಮುಖ ಸ್ಥಳಗಳು

ನ್ಯೂಯಾರ್ಕ್, ಚಿಕ್ಯಾಗೋ, ಬಾಲ್ಟಿಮೋರ್, ಲೆಕ್ಸಿಂಗ್‌ಟನ್, ಶಾರ್ಲಟ್, ಅಟ್ಲಾಂಟಾ, ಜಾರ್ಜಿಯಾ,
ಸ್ಯಾನ್ ಫ್ರಾನ್ಸಿಸ್ಕೋ, ನಯಾಗಾರಾ, ಚಾರ್ಲ್ಸ್‌ಟನ್, ಬರ್ಮಿಂಗ್‌ಹ್ಯಾಮ್, ಆಕ್ಸ್‌ಫರ್ಡ್,
ಫ್ಲಾರಿಡಾ, ಡಿಸ್ನಿಲ್ಯಾಂಡ್ ........ಇತ್ಯಾದಿ

## ಸಾಹಿತ್ಯ ಕೃತಿಗಳು

**ವೈಚಾರಿಕ ಕೃತಿಗಳು**: 1. ನಮ್ಮ ಗಣಪತಿ ಹೀಗೋ 2. ಸಾಯದ ಸಾವು ಮತ್ತು ಸ್ವರ್ಗಕ್ಕೆ ಪ್ರತಿಸ್ಪರ್ಧಿ 3. ವಿಚಾರವೃಷ್ಟಿ 4. ಮುತ್ತಾದ ಮಾತು 5. ಏಳು, ಏಳಯ್ಯ ಏಳು 6. ನುಡಿದೇಗುಲ 7. ಶಿವಾನಂದ ಉವಾಚ 8. ವಿಚಾರಮಾನಸ 9. ನೀವು ಹಿಂದೂಗಳಲ್ಲವೇ? ಹಾಗಾದರೆ ನೀವೇನು? 10. ಅದೇ ಹಾಡು 11. ಪಾಥೇಯ 12. ಸೂಕ್ತಿಸುಧಾ 13. ನುಡಿ-ಸಂಪದ

**ಧಾರ್ಮಿಕ ಕೃತಿಗಳು**: 1. ಆತ್ಮಜ್ಯೋತಿ ಅರಳಿ ನೀತಿ 2. ವಿದ್ವದ್ವಿಭೂತಿ

## ಧ್ವನಿ ಸುರುಳಿಗಳು

(ಚಿಂತನ ಮತ್ತು ಪ್ರವಚನ ಧಾರಾ )

1. ನಿಮ್ಮೊಂದಿಗೆ
2. ಪೀಠ ದರ್ಶನ
3. ನೀವು ಹಿಂದೂಗಳಲ್ಲವೇ? [ಭಾಗ-1, ಭಾಗ-2]
4. ಶಿವದುಂದುಭಿ [ಭಾಗ-1, ಭಾಗ-2]

## ಗೌರವ ಸಂಪಾದಕರು

ಶಿವದುಂದುಭಿ (ವೈಚಾರಿಕ ಮಾಸ ಪತ್ರಿಕೆ)

## ಸ್ವಾಮೀಜಿಯವರ ಕೆಲವು ಜನಪ್ರಿಯ ಸೂಕ್ತಿಗಳು

1. ಮಕ್ಕಳಿಗಾಗಿ ಆಸ್ತಿ ಮಾಡುವುದು ಬೇಡ.
ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ.

2. ಸಾಧನೆ ಮಾತನಾಡಬೇಕು
ಮಾತನಾಡುವುದೇ ಸಾಧನೆಯಾಗಬಾರದು.

3. ಬೇಡುವ ನಾಲಿಗೆಯಲ್ಲಿ ನಿಯತ್ತಿದ್ದರೆ
ಕೊಡುವ ಕೈಗಳಿಗೆ ಕೊರತೆ ಇಲ್ಲ.

4. ನಾವು ಮನುಕುಲದ ಹಿತಚಿಂತಕರಾಗುವಾ
ಮತಕುಲದ ಹಿತಚಿಂತಕರಾಗುವುದು ಬೇಡ.

5. ಧರ್ಮವು ಶ್ರೀಸಾಮಾನ್ಯನ ಕೈಯಲ್ಲಿದೆ.
ಧರ್ಮಗುರುಗಳು ಶ್ರೀಮಂತರ ಕೈಯಲ್ಲಿದ್ದಾರೆ!!

6. 'ನಾನು' ಅಳಿದು ಹೋಗುವುದು ಸಾಧನೆಯಲ್ಲ
'ನಾನು' ಬೆಳೆದು ನಿಲ್ಲುವುದು ಸಾಧನೆ.

7. 'ಎಲ್ಲರೂ ನನ್ನವರೆನ್ನಿ' ತೊಂದರೆ ಇಲ್ಲ.
'ಎಲ್ಲವೂ ನನ್ನದೆನ್ನಿ' ತೊಂದರೆ ತಪ್ಪಿದ್ದಲ್ಲ.

8. ಮಕ್ಕಳೇ ನೀವು 'ಪಿತೃಭಕ್ತ'ರಾಗಿ.
ಬರೀ 'ಪಿತ್ರಾರ್ಜಿತ'ದ ಭಕ್ತರಾಗಬೇಡಿ

## ಸ್ವಾಮೀಜಿಯವರ ಕನಸು

ಸಶಕ್ತ ರಾಷ್ಟ್ರನಿರ್ಮಾಣ, ನೈತಿಕ ಮೌಲ್ಯಗಳಿಗೆ ಉಸಿರು ತುಂಬುವುದು,
ಮಕ್ಕಳು ಮತ್ತು ಯುವಕರ ಸರ್ವಾಂಗೀಣ ಅಭಿವೃದ್ಧಿ

## ಸ್ವಾಮೀಜಿಯವರ ಕಾರ್ಯಕ್ಷೇತ್ರ

ವಿಶೇಷವಾಗಿ ಮಕ್ಕಳು ಮತ್ತು ನವಯುವಕರು,
ನೊಂದ ಮಹಿಳೆಯರು ಮತ್ತು ಪರಿತ್ಯಕ್ತ ವಯೋವೃದ್ಧರು

**ಈಗಾಗಲೇ ಜಾರಿಯಲ್ಲಿ ತಂದಿರುವ ಮತ್ತು ಸದ್ಯ ಚಲಾವಣೆಯಲ್ಲಿರುವ ಕೆಲ ಧ್ಯೇಯೋದ್ದೇಶಗಳು:**

1. ಜನರಲ್ಲಿ ಪರಿವಾರ ಮತ್ತು ಪರಿಸರ ಪ್ರಜ್ಞೆಯನ್ನು ತುಂಬುವುದು.
2. ದಿನೇ ದಿನೇ ವ್ಯಾವಹಾರಿಕ ಮತ್ತು ಅತಿವ್ಯಾವಹಾರಿಕಗೊಳ್ಳುತ್ತಿರುವ ಜಗತ್ತಿಗೆ ಮತ್ತು ಜನರಿಗೆ ಭಾವನಾತ್ಮಕ ಬದುಕಿನ ಸ್ಪರ್ಶ ಮಾಡಿಸುವುದು.
3. ಕ್ಲಬ್ಬು-ಪಬ್ಬುಗಳ ದಾಸರಾಗುತ್ತಿರುವ ಯುವ ಜನತೆಯನ್ನು ಎಚ್ಚರಿಸಿ ಅವರು 'ಕ್ಲಬ್ಬುದಾಸ'ರಾಗುವುದನ್ನು ಮತ್ತು 'ಪಬ್ಬುದಾಸ'ರಾಗುವುದನ್ನು ನಿಯಂತ್ರಿಸುವುದು.
4. ಮಕ್ಕಳನ್ನು ನೈತಿಕಗೊಳಿಸುವುದಕ್ಕಾಗಿ ಬಾಲಬೋಧ ಶಿಬಿರಗಳನ್ನು ಏರ್ಪಡಿಸುವುದು.
5. ಸಮಾಜಮುಖಿ ಚಿಂತನೆಗೆ ಅವಕಾಶವನ್ನು ಕಲ್ಪಿಸಿಕೊಡುವುದು.
6. ಕೋಮುಭಾವನೆಗಳಿಂದ ಜನರನ್ನು ವಿಸರ್ಜಿತಗೊಳಿಸಿ ಅವರಲ್ಲಿ 'ಸಾಮ ಭಾವನೆ'ಗಳನ್ನು ಮತ್ತು 'ಸೌಮ್ಯ ಭಾವನೆ'ಗಳನ್ನು ತುಂಬಲು ಪ್ರಯತ್ನಿಸುವುದು.
7. ಮಕ್ಕಳು ಭವಿಷ್ಯದ ಆಶಾಕಿರಣ ಮತ್ತು ಯುವಕರು ದೇಶದ ಸಂಪನ್ಮೂಲ ಎಂಬುವುದನ್ನು ಯಥಾವತ್ತಾಗಿ ಬಿಂಬಿಸುವುದು.
8. ವಯೋವೃದ್ಧರನ್ನು ಗೌರವಿಸುವುದಕ್ಕೆ ಜನರನ್ನು ಬದ್ಧರನ್ನಾಗಿಸುವುದು.....ಇತ್ಯಾದಿ

## ಯುವಕ, ಯುವತಿಯರಿಗೆ ಸ್ವಾಮೀಜಿಯ ಸಂದೇಶ

1. ಓ ನಮ್ಮ ಯುವ ಸಹೋದರ ಸಹೋದರಿಯರೇ,
ನೀವು ಈ ದೇಶದ ಆಸ್ತಿ, ಅಂತಸ್ತು ಮತ್ತು ಅಸ್ತಿತ್ವ.
ಈ ದೇಶಕ್ಕೊಂದು ಭವ್ಯ ಭವಿಷ್ಯತ್ತನ್ನು ರೂಪಿಸಿಕೊಡುವ ಮಹತ್ವದ ಜವಾಬ್ದಾರಿ ನಿಮ್ಮಗಳ ಹೆಗಲ ಮೇಲಿದೆ.
ಈ ನಮ್ಮ ದೇಶ ದೊಡ್ಡದು. ಈ ದೇಶದಂತೆ ನಮ್ಮ ಉದ್ದೇಶವೂ ದೊಡ್ಡದಾಗಿರಬೇಕು.
ನೀವು ಸಾಧನೆಯ ಸಹ್ಯಾದ್ರಿಯಾಗಿ ಮತ್ತು ಹೆಮ್ಮೆಯ ಹಿಮಾಲಯವಾಗಿ ಬೆಳೆದು ನಿಲ್ಲಬೇಕು.
ನಿಮ್ಮ ಯೌವ್ವನವದು ಯತಿಯಾಗಲಿ, ಗತಿಯಾಗಲಿ, ಮತಿಯಾಗಲಿ.
ಆದರೆ ಅದು 'ಯಯಾತಿ'ಯಾಗುವುದು ಬೇಡ.
ನಿಮ್ಮ ಯೌವ್ವನವನ್ನು ಈ ದೇಶಕ್ಕಾಗಿ ಮತ್ತು ಜನತಾ ಜನಾರ್ಧನನ ಕಲ್ಯಾಣಕ್ಕಾಗಿ ಅಹರ್ನಿಶಿ ದುಡಿಸುವುದಾಗಲಿ.

2. ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿದೆ.
ಆದ್ದರಿಂದ ನಿಮ್ಮ ಕೈಗಳನ್ನು ನೀವು ಬಲಪಡಿಸಿಕೊಳ್ಳಿ.
ಬೇರಾರ ಕೈಗಳನ್ನು ಬಲಪಡಿಸುವ ಅಥವಾ ಬೆಚ್ಚಗಾಗಿಸುವ ಅವಶ್ಯಕತೆ ಇಲ್ಲ.

## ವಿಳಾಸ

ಷ. ಬ್ರ. ಡಾ॥ ಶ್ರೀ ಶಿವಾನಂದ ಶಿವಾಚಾರ್ಯರು M.A., Ph.D., LL.B
ಹಿರೇಮಠ, ಚಿಕ್ಕಪೇಟೆ, ತುಮಕೂರು-5 7 2 1 0 1

ದೂರವಾಣಿ- 2 2 7 3 2 4 2 ( 0 8 1 6 ) ಮೊಬೈಲ್ : 9 4 4 8 6 6 1 3 7 6

E-mail Address : shiva.dundubhi@gmail.com
Web Site : www. namahshivaya.org